ಜನಮಾಧ್ಯಮ

**ಚುಟುಕು ಸುದ್ದಿ**

ಹೊಸದಿಲ್ಲಿ : ಇಲ್ಲಿನ ಜಂತರ್ ಮಂತರ್‌ನಲ್ಲಿ ಆಂಧ್ರ ಪ್ರದೇಶಕ್ಕೆ ವಿಶೇಷ ಸ್ಥಾನಮಾನವನ್ನು ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ತೆಲುಗು ದೇಶಂ ಪಕ್ಷದ ಸಂಸದರ ಗುಂಪೊಂದನ್ನು ಭೇಟಿಯಾಗಿ ತನ್ನ ಬೆಂಬಲ ಪ್ರಕಟಿಸಿದ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ, 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಬಂದರೆ ಆಂಧ್ರ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವ ಭರವಸೆಯನ್ನು ನೀಡಿದ್ದಾರೆ.

# ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ

## ಮನುವಿಕಾಸ ಸಂಸ್ಥೆಯಿಂದ ಗುಡ್ನಾಪುರ ಕೆರೆ ಹೂಳೆತ್ತುವ ಕಾಮಗಾರಿ ಆರಂಭ | ಪರಶುರಾಮಪ್ಪ ಚಾಲನೆ




ಗುಡ್ನಾಪುರ ಬಂಗಾರೇಶ್ವರ ಟ್ರಸ್ಟ್ ಅಧ್ಯಕ್ಷ ಪರಶುರಾಮಪ್ಪ ಮಾತನಾಡುತ್ತಿರುವುದು.



ಕಾಮಗಾರಿ ಪ್ರಾರಂಭವಾಗಿರುವುದು.

ಶಿರಸಿ: ಮನುವಿಕಾಸ ಸಂಸ್ಥೆ ವಿವಿಧ ಸಂಘ ಸಂಸ್ಥೆಗಳ ಜೊತೆಗೂಡಿ ಬನವಾಸಿ ವಲಯದಲ್ಲಿ 10 ಕೆರೆಗಳ ಪುನರುಜ್ಜೀವನ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಈಗಾಗಲೇ ಸಂಸ್ಥೆ 5 ಕೆರೆಗಳ ಕಾಮಗಾರಿ ಅತೀ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಿದೆ. ಜಿಲ್ಲೆಯ ಅತೀ ದೊಡ್ಡದಾದ ಗುಡ್ನಾಪುರ ಕೆರೆಯ ಅಭಿವೃದ್ಧಿಗೆ ಸಂಸ್ಥೆ ಶ್ರಮಿಸುತ್ತಿರುವುದು ಶ್ಲಾಘನೀಯ. ಈ ಸಂಸ್ಥೆ ಗುಡ್ನಾಪುರ ಗ್ರಾಮಕ್ಕೆ ಆಗಮಿಸಿ ಕೆರೆ ಅಭಿವೃದ್ಧಿಪಡಿಸುತ್ತಿರುವುದು ಈ ಭಾಗದ ಜನರ ಭಾಗ್ಯವಾಗಿದೆ. ಸುತ್ತಲೂ ಬಂಡು ನಿರ್ಮಿಸುವುದರಿಂದ ಈ ಕೆರೆ ಪ್ರವಾಸೋದ್ಯಮ ದೃಷ್ಟಿಯಿಂದ ಮತ್ತಷ್ಟು ಮಹತ್ವ ಪಡೆಯಲಿದೆ. ಬಂಗಾರೇಶ್ವರ ಸೇವಾ ಅಭಿವೃದ್ಧಿ ಟ್ರಸ್ಟ ವತಿಯಿಂದ ಮನುವಿಕಾಸ ಸಂಸ್ಥೆಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಮತ್ತು ಸ್ವತಃ ತಾವೂ 25000 ರೂ.ದೇಣಿಗೆ ನೀಡುವುದಾಗಿ ಗುಡ್ನಾಪುರ ಬಂಗಾರೇಶ್ವರ ಟ್ರಸ್ಟ್ ಅಧ್ಯಕ್ಷ ಪರಶುರಾಮಪ್ಪ ಈಡೂರ ತಿಳಿಸಿದರು.

ಅವರು ಮಾ.5 ರಂದು ಮನುವಿಕಾಸ ಸಂಸ್ಥೆ ಮತ್ತು ಕೋಕಾ ಕೋಲಾ ಇಂಡಿಯಾ ಫೌಂಡೇಶನ್ ಹಮ್ಮಿಕೊಂಡಿದ್ದ ಗುಡ್ನಾಪುರ ಬಂಗಾರೇಶ್ವರ ಕೆರೆ ಪುನರುಜ್ಜೀವನ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಪಂಚಾಯತಿ ಸದಸ್ಯೆ ಶ್ರೀಮತಿ ರೂಪಾ ನಾಯ್ಕ ಮಾತನಾಡಿ ಮನುವಿಕಾಸ ಸಂಸ್ಥೆ ಪ್ರಾರಂಭದಲ್ಲಿ ಕೆರೆ ಅಭಿವೃದ್ಧಿ ಪಡಿಸುತ್ತೇವೆ ಎಂದಾಗ ನಂಬಲು ಅಸಾಧ್ಯವಾಗಿತ್ತು. ಆದರೆ ಸಂಸ್ಥೆ 5 ಕೆರೆಗಳನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಿ ಮನೆ ಮನಗಳಲ್ಲಿ ಹೆಸರುವಾಸಿಯಾಗಿದೆ. ಬರಗಾಲ ಮತ್ತು ನೀರಿನ ಕೊರತೆಯ ಈ ಸಂದರ್ಭದಲ್ಲಿ ಮನುವಿಕಾಸದ ಕೆಲಸ ಬಹಳ ಪ್ರಸ್ತುತವಾಗಿದೆ. ಸಂಸ್ಥೆ ನೀರು ಸಂರಕ್ಷಣೆಯೊಂದಿಗೆ ಮಹಿಳಾ ಸಬಲೀಕರಣ, ಶಿಕ್ಷಣಕ್ಕೆ ಪ್ರೋತ್ಸಾಹ ಮತ್ತಿತರ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುತ್ತಿರುವುದು ಶ್ಲಾಘನೀಯ. ರೈತರು ತಮ್ಮ ಹೊಲಗಳಿಗೆ ಕೆರೆ ಮಣ್ಣನ್ನು ಸಾಗಿಸುವ ಮೂಲಕ ಕೆರೆ ಅಭಿವೃದ್ಧಿಗೆ ಸಂಸ್ಥೆಯೊಂದಿಗೆ ಕೈಜೋಡಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟ ಮಾತನಾಡಿ ಮನುವಿಕಾಸ ಸಂಸ್ಥೆ ಸಿದ್ದಾಪುರ ತಾಲೂಕಿನ ಕರ್ಜಗಿ ಎನ್ನುವ ಕುಗ್ರಾಮದಲ್ಲಿ ಪ್ರಾರಂಭವಾಗಿ ಈಗ ಜಿಲ್ಲೆಯಾದ್ಯಂತ ವಿವಿಧ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಈಗಾಗಲೇ ಸಂಸ್ಥೆಯಿಂದ 2500 ಕ್ಕೂ ಹೆಚ್ಚು ಸಣ್ಣ ಕೆರೆಗಳನ್ನು ಮತ್ತು ಕೃಷಿ ಹೊಂಡಗಳನ್ನು ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಈಗ ಬನವಾಸಿ ಹೋಬಳಿಯಲ್ಲಿ 10 ದೊಡ್ಡ ಕೆರೆಗಳ ಪುನರುಜ್ಜೀವನ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈಗಾಗಲೇ 3 ಕೆರೆಗಳ ಕಾಮಗಾರಿ ಸಂಪೂರ್ಣ ಮುಕ್ತಾಯಗೊಂಡಿದೆ. ಸಂಸ್ಥೆಯು ಜಿಲ್ಲೆಯ ಅತೀ ದೊಡ್ಡದಾದ ಸುಮಾರು 164 ಎಕರೆ ವಿಸ್ತೀರ್ಣದ ಗುಡ್ನಾಪುರ ಕೆರೆಯ ಭಾಗಶಃ ಅಭಿವೃದ್ಧಿಗೆ ಮುಂದಾಗಿದೆ. ಸ್ಥಳೀಯ ರೈತರು ಮತ್ತು ಸಂಘ ಸಂಸ್ಥೆಗಳು ಕೈಜೋಡಿಸಿದ್ದಲ್ಲಿ ಒಂದು ಹೊಸ ಇತಿಹಾಸವನ್ನು ನಿರ್ಮಿಸಲು ಸಂಸ್ಥೆ ಸಿದ್ಧವಿದೆ ಎಂದರು. ಯಲ್ಲಾಪುರ-ಮುಂಡಗೋಡ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರವರಿಗೆ ಅಭಿನಂದಿಸಿ ಇಲಾಖೆಗಳಿಂದ ತ್ವರಿತ ಅನುಮತಿ ದೊರಕಿಸಿಕೊಟ್ಟು ಯೋಜನೆಯ ಯಶಸ್ಸಿಗೆ ಶಾಸಕರು ಸಂಪೂರ್ಣ ಸಹಕಾರ ನೀಡಿದ್ದಾರೆ ಎಂದರು. ಅದೇರೀತಿ ಸ್ಥಳೀಯ ಗ್ರಾಮ ಪಂಚಾಯತಿ ಮತ್ತು ವಿವಿಧ ಸಂಘಟನೆಗಳು ಯೋಜನೆಯ ಯಶಸ್ಸಿಗೆ ಕೈ ಜೋಡಿಸಿವೆ ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಗ್ರಾಮ ಪಂಚಾಯತಿ ಅಧ್ಯಕ್ಷ ಅಣ್ಣಾಜಿ ಗೌಡ ಮಾತನಾಡಿ ಮನುವಿಕಾಸ ನಮ್ಮ ಪಂಚಾಯತ ವ್ಯಾಪ್ತಿಯಲ್ಲಿ 3 ಕೆರೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಿ ಮೆಚ್ಚುಗೆ ಗಳಿಸಿದೆ. ಸಂಸ್ಥೆಯ ಈ ಸಾಧನೆ ರಾಜ್ಯದ ಮೂಲೆ ಮೂಲೆಗೆ ತಲುಪುವಂತಾಗಬೇಕು ಎಂದರು.

ಹಾಡಲಗಿ ಮತ್ತು ಕಂತ್ರಾಜಿ ಕೆರೆಗಳ ಅಭಿವೃದ್ಧಿಯಲ್ಲಿ ಸಂಸ್ಥೆಗೆ ಸಹಕಾರ ನೀಡಿದ ಗ್ರಾಮ ಪಂಚಾಯತಿ ಸದಸ್ಯರಾದ ಅಶೋಕ ನಾಯ್ಕ ಮಧುರವಳ್ಳಿ ಮತ್ತು ಶಿವಶಂಕರ ಗೌಡ ಕಂತ್ರಾಜಿ ಇವರಿಗೆ ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಮನುವಿಕಾಸ ಸಂಸ್ಥೆಯ ಸಂಸ್ಥಾಪಕ ಹರಿಶ್ಚಂದ್ರ ಭಟ್ಟ ಅಧ್ಯಕ್ಷತೆ ವಹಿಸಿದ್ದರು. ಡಾ. ಅಬ್ದುಲ್ ರವೂಫ್, ಎಪಿಎಂಸಿ ಸದಸ್ಯ ಪ್ರಶಾಂತ ಗೌಡರ್, ಸ್ಥಳೀಯ ಮುಖಂಡರಾದ ಸುಧಾಕರ ನಾಯ್ಕ, ಕಾಂಗ್ರೆಸ್ ಮುಖಂಡ ದ್ಯಾಮಣ್ಣಾ ದೊಡ್ಮನಿ, ಬೋಜಪ್ಪಾ ನಾಯ್ಕ, ದೇವೇಂದ್ರ ನಾಯ್ಕ, ಎಚ್. ಕೆ ನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

ಕುಮಾರಿ ಭವ್ಯಾ ಹೆಗಡೆಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಡಿ. ಜಿ. ಭಟ್ಟ ಸ್ವಾಗತಿಸಿದರು, ರಘು ನಾಯ್ಕ ವಂದಿಸಿದರು.

# ವ್ಯಕ್ತಿಯ ಮನಸು ಕಡಲಿಗಿಂತ ಅಧಿಕ ವಿಸ್ತಾರ